RNU AIR DHARWAD

SEPTEMBER 03, 2026

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

**<><><>**

**ಅಂತಾರಾಷ್ಟ್ರೀಯ ಕಡಲ ಸಂಸ್ಥೆ,** "ನೀತಿಯಿಂದ ಅಭ್ಯಾಸಕ್ಕೆ; ಕಡಲ ಶ್ರೇ ್ಠತೆಯನ್ನು ಬಲಪಡಿಸುವುದು" ಎಂಬ ಧ್ಯೇಯದೊಂದಿಗೆ, ವಿಶ್ವ ವಾಣಿಜ್ಯ ಕಡಲ ನಾವಿಕರ ದಿನಾಚರಣೆಯನ್ನು, ಇಂದು, ಆಚರಿಸುತ್ತಿದೆ. ಪ್ರಸ್ತುತ ಜಾಗತಿಕ ಅಪಾಯದ, ಸಂಘ ್ಷ ವಲಯಗಳನ್ನು ದಾಟುವಾಗ, ನೌಕಾ ಪಡೆ ಹಾಗೂ ಕಡಲ ಸಿಬ್ಬಂದಿ ಸುರಕ್ಷತೆಯ ಮೇಲೆ, ಹೆಚ್ಚು ಗಮನಹರಿಸಲು, ಆಚರಣೆಯನ್ನು ಕೇಂದ್ರೀಕರಿಸಲಾಗಿದೆ.

<><><>

**ಭಾರತೀಯ ನೌಕಾಪಡೆಯ,** 28 ವರ್ಷದ ನಾವಿಕ, ಕುರುಬಾ ದಿನೇಶ ಕುಮಾರ, ಉತ್ತರಕನ್ನಡ ಜಿಲ್ಲೆ, ಕಾರವಾರದ, ಅರ್ಗಾ ಬಳಿಯ, ಕದಂಬ ನೌಕಾ ನೆಲೆಯಿಂದ, ಕಳೆದ ಆಗಸ್ಟ್ 27 ರಂದು, ನಾಪತ್ತೆಯಾಗಿದ್ದಾರೆ. ಮೂಲತಃ ಆಂಧ್ರಪ್ರದೇಶದ, ಅನಂತಪುರ ಜಿಲ್ಲೆಯ, ಕುಂಟಿಮಡ್ಡಿಯವರು. ಕದಂಬ ನೌಕಾ ನೆಲೆ, ರಾಷ್ಟ್ರದ ಭದ್ರತೆಯ ದೃಷ್ಟಿಯಿಂದ, ಅತ್ಯಂತ ಸೂಕ್ಷ್ಮ ಪ್ರದೇಶವಾಗಿದೆ. ಕಾರವಾರ ಗ್ರಾಮೀಣ ಠಾಣೆಯ ಪೊಲೀಸರು, ಹುಡುಕಾಟ ಆರಂಭಿಸಿದ್ದಾರೆ.

<><><>

**ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅಧ್ಯಕ್ಷತೆಯಲ್ಲಿ,** ಬೆಂಗಳೂರಿನಲ್ಲಿ ಇಂದು ಸಚಿವ ಸಂಪುಟ ಸಭೆ ನಡೆಯಲಿದೆ. ಈ ತಿಂಗಳ 21 ರಿಂದ 24 ರ ವರೆಗೆ, ವಿಧಾನಮಂಡಲ ವಿಶೇಷ ಅಧಿವೇಶನ ನಡೆಸಲು, ರಾಜ್ಯ ಸರ್ಕಾರ ಚಿಂತನೆ ನಡೆಸಿದ್ದು, ಇಂದು ಅಂತಿಮ ತೀರ್ಮಾನದ ನಿರೀಕ್ಷೆ ಇದೆ. ಪಶ್ಚಿಮಘಟ್ಟದ ಸೂಕ್ಷ್ಮ ಪ್ರದೇಶಗಳ ಕುರಿತಾದ, ಡಾಕ್ಟರ್ ಕೆ. ಕಸ್ತೂರಿರಂಗನ್ ವರದಿ, ಹಾಗೂ ಈ ಸಂಬಂಧ ಕೇಂದ್ರ ಸರ್ಕಾರ, 7ನೇ ಬಾರಿಗೆ ಹೊರಡಿಸಿರುವ, ಕರಡು ಅಧಿಸೂಚನೆ, ರಾಜ್ಯ ಸರ್ಕಾರದ ನಿಲುವು ಮತ್ತು ಆಕ್ಷೇಪ ಸ್ಪಷ್ಟ ಪಡಿಸಲು, ಜನ ಪ್ರತಿನಿಧಿಗಳೊಂದಿಗೆ ಚರ್ಚಿಸಲು, ರಾಜ್ಯ ಸರ್ಕಾರ ಬಯಸಿದೆ. ಉದ್ಯಾನಗಳ ಶೇಕಡ 5ರಷ್ಟು ಜಾಗೆ ಪರಭಾರೆ, ಬರಗಾಲದ ಬಗ್ಗೆ ಚರ್ಚಿಸಲು, ರಾಜ್ಯ ಸರ್ಕಾರ ಚಿಂತನೆ ನಡೆಸಿದೆ ಎಂದು, ವರದಿಗಳು ತಿಳಿಸಿವೆ.

<><><>

**ರಂಗಭೂಮಿ, ನಮ್ಮ ಬದುಕಿನ ಪ್ರತಿಬಿಂಬ** ಎಂದು, ಜೆ.ಎಸ್.ಎಸ್. ಸಂಸ್ಥೆ ಕಾರ್ಯದರ್ಶಿ, ಪ್ರೊಫಸರ್ ಅಜಿತಪ್ರಸಾದ, ಹೇಳಿದ್ದಾರೆ. ದಿವಂಗತ, ಪ್ರೊಫೆಸರ್ ನ.ವಜ್ರಕುಮಾರ ಸ್ಮರಣೆಯ, ವಜ್ರಸಿರಿ ಐದು ದಿನಗಳ ರಂಗೋತ್ಸವಕ್ಕೆ, ಧಾರವಾಡದ ಜೆ.ಎಸ್.ಎಸ್. ಮಹಾವಿದ್ಯಾಲಯದ, ಸನ್ನಿಧಿ ಸಭಾಂಗಣದಲ್ಲಿ, ಚಾಲನೆ ನೀಡಿ, ಮಾತನಾಡಿದರು. ಮುಖ್ಯ ಅತಿಥಿಯಾಗಿ, ಧಾರವಾಡ ರಂಗಾಯಣದ ನಿರ್ದೇಶಕ, ಝಾಕೀರ್ ನದಾಫ್ ಪಾಲ್ಗೊಂಡಿದ್ದರು. ಖ್ಯಾತ ರಂಗಕರ್ಮಿ, ದಿವಂಗತ ಯಶವಂತ ಸರದೇಶಪಾಂಡೆ ಪರಿಕಲ್ಪನೆಯ, ಹೆಸರಾಂತ ಕೊಳಲು ವಾದಕ, ಪ್ರವೀಣ ಗೋಡಖಿಂಡಿ ಹಾಗೂ ಹಿರಿಯ ನಟ, ರವಿ ಕುಲಕರ್ಣಿ ನಟಿಸಿದ, 'ಕೊಳಲು.comedy" ನಾಟಕ, ಪ್ರೇಕ್ಷಕರನ್ನು ರಂಜಿಸಿತು.

<><><>

**ಧಾರವಾಡ ತಾಲೂಕು,** ಅಳ್ನಾವರದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ, ಧಾರವಾಡ ಜಿಲ್ಲೆ ಹಿರಿಯ ಸಿವಿಲ್ ನ್ಯಾಯಾಧೀಶ ಅಲ್ಲಪ್ಪ ಬಡಿಗೇರ ಭೇಟಿ ನೀಡಿ, ಆರೋಗ್ಯ ಸೇವೆಗಳ ಮಾಹಿತಿ ಪಡೆದು, ಪರಿಶೀಲಿಸಿದರು.

<><><>

**ಗ್ರಾಮೀಣ ಭಾಗಕ್ಕೆ ನೀರು ಪೂರೈಸುವ,** ಜಲಮೂಲಗಳಾದ, ಕೆರೆ, ನದಿ, ಸರೋವರಗಳಲ್ಲಿ, ಮಲೀನ ನೀರು ಸೇರಿ, ಕಲುಷಿತಗೊಳ್ಳದಂತೆ ತಡೆಗಟ್ಟಲು, ರಾಷ್ಟ್ರೀಯ ಗ್ರಾಮೀಣ, ಜಲಮೂಲ ಸಂರಕ್ಷಣಾ ಯೋಜನೆ ಅಭಿವೃದ್ಧಿ ಪಡಿಸುವಂತೆ, ಗ್ರಾಮೀಣಾಭಿವೃದ್ಧಿ ಖಾತೆ ಸಚಿವ, ಈಶ್ವರ ಖಂಡ್ರೆ, ಹೊಸ ದಿಲ್ಲಿಯಲ್ಲಿ ಆಗ್ರಹಿಸಿದ್ದಾರೆ. ಜಲಮೂಲಗಳ ಸುಸ್ಥಿರತೆ ಕುರಿತ, ಶೃಂಗಸಭೆಯ ಸಮಾರೋಪದಲ್ಲಿ, ಸಚಿವರು ಮಾತನಾಡಿದರು.

<><><>

**ಕರ್ನಾಟಕ ವೇಗವಾಗಿ ಬೆಳೆಯುತ್ತಿದೆ;** ಬೆಂಗಳೂರಿನ ಮೇಲೆ ಒತ್ತಡ ಕಡಿಮೆ ಮಾಡಲು, ಎರಡನೇ ಬೆಂಗಳೂರು ನಿರ್ಮಿಸಲು, ಗಂಭೀರ ಚಿಂತನೆ ನಡೆಸುವಂತೆ, ನೀತಿ ಆಯೋಗದ ಉಪಾಧ್ಯಕ್ಷ ಅಶೋಕುಮಾರ ಲಾಹಿರಿ, ಮುಖ್ಯಮಂತ್ರಿ ಅವರೊಂದಿಗಿನ, ಬೆಂಗಳೂರಿನಲ್ಲಿ ಆಯೋಜಿತ ಸಭೆಯಲ್ಲಿ ಸಲಹೆ ನೀಡಿದ್ದಾರೆ. ಕರ್ನಾಟಕದಲ್ಲಿ ಒಣಭೂಮಿ ಪ್ರದೇಶ ಹೆಚ್ಚಿದೆ. ಕೃಷಿ ಚಟುವಟಿಕೆ ಕೈಗೊಳ್ಳಲು ಸಾಧ್ಯವಾಗುವಂತೆ, ವೈವಿಧ್ಯಮಯ ಬೆಳೆ ಬೆಳೆಯುವಂತೆ, ಒಣ ಭೂಮಿ ಸಜ್ಜುಗೊಳಿಸಲು, ಅವರು ಯೋಜನೆ ರೂಪಿಸುವಂತೆ, ತಿಳಿಸಿದರು.

<><><>

**ಸರ್ಕಾರದ ಕಾರ್ಯಕಲಾಪಗಳಿಗೆ ಸಂಬಂಧಿಸಿದಂತೆ,** ಜನರು ದೂರು ಸಲ್ಲಿಸಲು ಅನುವಾಗುವಂತೆ, ಪ್ರಜಾ ಸೇವಾ ಆಂದೋಲನ ಇಲಾಖೆಗೆ, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ವಿಜಯನಗರ ಜಿಲ್ಲೆ, ಕೂಡ್ಲಿಗಿಯಲ್ಲಿ, ನಾಡಿದ್ದು ಚಾಲನೆ ನೀಡಲಿದ್ದಾರೆ. ಕೂಡ್ಲಿಗಿ ಶಾಸಕ ಡಾಕ್ಟರ್ ಎನ್.ಟಿ. ಶ್ರೀನಿವಾಸ ನೇತೃತ್ವದಲ್ಲಿ, ಗುಡೇಕೋಟೆ ರಸ್ತೆಯಲ್ಲಿ, ಕಾರ್ಯಕ್ರಮದ ಸಿದ್ಧತೆಗಳು ನಡೆದಿವೆ.

<><><>

**‘ಅಸ್ಮಿತಾ’, ಮಹಿಳೆಯರಿಗಾಗಿ,** ರಾಜ್ಯ ಮಟ್ಟದ, ರೋಡ್ ಸೈಕ್ಲಿಂಗ್ ಚಾಂಪಿಯನ್‌ಶಿಪ್, ಇದೇ ಶನಿವಾರ ಹಾಗೂ ಭಾನುವಾರ, ವಿಜಯಪುರ ನಗರ, ಹೊರ ವಲಯದ, ಸೊಲ್ಲಾಪುರ ರಾಷ್ಟ್ರೀಯ ಹೆದ್ದಾರಿಯಲ್ಲಿ ನಡೆಯಲಿದೆ. ರಾಜ್ಯ ಅಮೆಚ್ಯೂರ್ ಸೈಕ್ಲಿಂಗ್ ಸಂಸ್ಥೆ ಅಧ್ಯಕ್ಷ, ರಾಜು ಬಿರಾದಾರ ಮಾಹಿತಿ ನೀಡಿ, 17 ವರ್ಷದ ಬಾಲಕಿಯರಿಗಾಗಿ, 10 ಕಿಲೋ ಮೀಟರ್ ಟೈಮ್ ಟ್ರಾಯಲ್ ಮತ್ತು 25 ಕಿಲೋ ಮೀಟರ್ ಮಾಸ್ ಸ್ಟಾರ್ಟ್ ನಡೆಯಲಿದೆ. ಮಹಿಳೆಯರಿಗಾಗಿ, 20 ಕಿಲೋ ಮೀಟರ್ ಟೈಮ್ ಟ್ರಾಯಲ್ ಹಾಗೂ 45 ಕಿಲೋ ಮೀಟರ್ ಮಾಸ್ ಸ್ಟಾರ್ಟ್ ಆಯೋಜಿಸಲಾಗಿದೆ ಎಂದರು. **ವಿಜಯಪುರದ ನೂತನ ವೆಲೋಡ್ರೋಮ್‌ನಲ್ಲಿ,** 11 ಮತ್ತು 12ನೇ ತಾರೀಖಿನಂದು, ರಾಜ್ಯ ಮಟ್ಟದ ಟ್ರ್ಯಾಕ್ ಸೈಕ್ಲಿಂಗ್ ಚಾಂಪಿಯನ್‌ಶಿಪ್ ಸಹ ಜರುಗಲಿದೆ.

<><><>

**ಲುಧಿಯಾನಾದಲ್ಲಿ ನಡೆಯುತ್ತಿರುವ,** ರಾಷ್ಟ್ರೀಯ ಯುವ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನ, ಎರಡನೇ ದಿನವಾದ ನಿನ್ನೆ, ಕರ್ನಾಟಕದ ನಾಗಿನಿ ಸಾವಿರ ಮೀಟರ್ ಓಟ ಮತ್ತು ಜಿ.ಎಂ. ಕೀರ್ತಿ ಎತ್ತರ ಜಿಗಿತದಲ್ಲಿ, ಚಿನ್ನದ ಪದಕ ಗೆದ್ದಿದ್ದಾರೆ.

<><><>

**ಒಂದೇ ಋತುವಿನಲ್ಲಿ,** 8 ಸಾವಿರ ಮೀಟರ್ ಗಿಂತ ಎತ್ತರದ, ಐದು ಶಿಖರಗಳನ್ನು ಏರಿದ, ಮೊದಲ ಭಾರತೀಯ ಮಹಿಳೆ, ಪರ್ವತಾರೋಹಿ, ಬಲ್ಜೀತ್ ಕೌರ್ ಸೇರಿದಂತೆ, ನಾಲ್ವರು, 2024ನೇ ಸಾಲಿನ, ತೇನ್ಸಿಂಗ್ ನೋರ್ಗೆ ರಾಷ್ಟ್ರೀಯ ಸಾಹಸ ಪುರಸ್ಕಾರಕ್ಕೆ ಭಾಜನರಾಗಿದ್ದಾರೆ ಎಂದು, ಕೇಂದ್ರ ಕ್ರೀಡಾ ಸಚಿವಾಲಯ ತಿಳಿಸಿದೆ. ಪುರಸ್ಕಾರ ಕಂಚಿನ ಪುತ್ಥಳಿ, 15 ಲಕ್ಷ ರೂಪಾಯಿ ನಗದು ಹಾಗೂ ಪ್ರಮಾಣಪತ್ರ ಒಳಗೊಂಡಿದೆ.

**<><><>**

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**